**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ**

**ಆಳಂದ**

ಸಿ.ಸಿ, ನಂಬರ 176 /2018 ಸಿ.ಡಬ್ಲೂ.11 ಪಿ.ಡಬ್ಲೂ.8

| | |
|---|---|
| ಹೆಸರು | ಸುರೇಶಬಾಬು |
| ತಂದೆ/ಗಂಡ | ರುದ್ರಪ್ಪಾ |
| ವಯಸ್ಸು | 59 ವರ್ಷ |
| ಉದ್ಯೋಗ | ಸಿ.ಪಿ.ಐ ಗೋಕಾಕ |
| ವಾಸಸ್ಥಳ | ಗೋಕಾಕ |

ದಿನಾಂಕ 18-03-2026
ಸತ್ಯ ಪ್ರತಿಜ್ಞೆಯ ಮೇರೆಗೆ

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:**

ನಾನು ದಿಃ 25-01-2017 ರಿಂದ ದಿಃ 04.10.2018 ರವರೆಗೆ ಪಿ.ಎಸ್.ಐ ಅಂತಾ ಆಳಂದ ಪೋಲಿಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17-10-2017 ರಂದು ಮ. 01.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸ-1 ರವರು ನೀಡಿದ ಗಣಕೀಕೃತ ದೂರಿನ ಸಾರಾಂಶದ ಮೇರೆಗೆ ಗುನ್ಹಾ ಸಂಖ್ಯೆ 200/2017 ಅಂತಾ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೇನೆ. ಪ್ರ.ವ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಅದೇ ದಿನ 3.30 ರಿಂದ 4.30 ರವರೆಗೆ ಚಾಸಾ 1 ರವರು ತೋರಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮಾಡಿರುತ್ತೇನೆ. ಅದೇ ದಿನ ಚಾಸಾ 1 ರವರು ನೀಡಿದ ಮದುವೆ ಆಮಂತ್ರಣ ಪತ್ರಿಕೆ ಮತ್ತು ನಿಖಾ ಪುಸ್ತಕದ ಅಟೇಸ್ಟೇಡ್ ಮಾಡಿದ ಪ್ರತಿಗಳನ್ನು , ಆಧಾರ ಕಾರ್ಡ ಮತ್ತು ಮದುವೆ ಭಾವಚಿತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಚಾಸಾ 4 ರಿಂದ 9 ರವರ ಹೇಳಿಕೆಗಳನು ಪಡೆದುಕೊಂಡಿರುತ್ತೇನೆ. ಮುಂದಿನ ತನಿಖೆಗಾಗಿ ಅದೇ ದಿನ ಚಾಸಾ 12 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ.

ನಿಪಿ. 1 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 1 (ಬಿ) ಅಂತಾ ಗುರುತಿಸಲಾಯಿತು. ಪ್ರ.ವ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 6(ಎ) ಎಂದು ಗುರುತಿಸಲಾಯಿತು. ನಿಪಿ. 4 ರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 4 (ಸಿ) ಅಂತಾ ಗುರುತಿಸಲಾಯಿತು. ಸಾಕ್ಷಿಯ ಈಗಾಗಲೇ ಗುರುತಿಸಲಾದ ನಿಪಿ.2 ಮತ್ತು 3 ನ್ನು ನೋಡಿ ಗುರುತಿಸುತ್ತಾರೆ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಬಿ.ಜಿ.ಬಿ ವಕೀಲರಿಂದ:

ದೂರನ್ನು ಸಲ್ಲಿಸಿಸಲು ಚಾಸಾ 1 ರವರು ಬಂದಿದ್ದರು ಮತ್ತು ಅವರ ಜೊತೆಗೆ ಯಾರು ಬಂದಿದ್ದರು ಅಂತಾ ನನಗೆ ನೆನಪು ಇರುವುದಿಲ್ಲ. ಎಷ್ಟು ಜನ ಬಂದಿದ್ದರು ಅಂತಾ ನೆನಪು ಇಲ್ಲಾ. 5-6 ಜನ ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಖಾ ಪುಸ್ತಕವನ್ನು ನೋಡಿ ಅದು ಚಾಸಾ 1 ರವರಿಗೆ ಸಂಬಂಧಿಸಿದ್ದು ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಾಜಿರವರನ್ನು ವಿಚಾರಿಸಿ ಪಡೆದಿರುತ್ತೇನೆ ಅಂತಾ ನುಡಿಯುತ್ತಾರೆ. ಸದರಿ ನಿಖಾ ಪುಸ್ತಕದ ಭಾಷಾಂತರಣ ಪ್ರತಿಯನ್ನು ನಾನು

ಕೇಳಿರುವುದಿಲ್ಲ ಅವರು ಓದಿ ಹೇಳಿರುತ್ತಾರೆ. ಭಾವಚಿತ್ರಗಳ ಜೊತೆಗೆ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ. ಚಾಸಾ 1 ರವರು ಅವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 10-10-2017 ರಂದು ಮ. 1.00 ಗಂಟೆಗೆ ನಾನು ದೂರನ್ನು ಸಲ್ಲಿಸಿರುತ್ತೇನೆ ಅಂತಾ ಸಾಕ್ಷಿ ಹೇಳಿದ್ದು, ನೀವು ಅದರಂತೆ ಪ್ರಕರಣವನ್ನು ದಾಖಲಿಸಿದ್ದೀರಾ ಎಂದರೆ ಸಾಕ್ಷಿಯ ಅವರು ದೂರು ನೀಡಿದ ದಿನ ನಾನು ಪ್ರಕರಣವನ್ನು ದಾಖಲಿಸಿರುತ್ತೇನೆ ಅಂತಾ ನುಡಿಯುತ್ತಾರೆ. ಚಾಸಾ 1 ರವರು ದಿಃ 10-10-2017 ರಂದು ದೂರನ್ನು ಸಲ್ಲಿಸಿದ್ದರು ಸಹಿತ ನಾನು ತಡವಾಗಿ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪಂಚನಾಮೆ ಮಾಡುವ ಸಮಯದಲ್ಲಿ ಒಂದು ನಕಾಶೆ ತಯಾರಿಸಿ ಘಟನಾ ಸ್ಥಳದ ಚಕಬಂದಿಯನ್ನು ತಯಾರು ಮಾಡುತ್ತೇವೆ ಎಂದರೆ ಸರಿ. ನಿಪಿ. 4 ರಲ್ಲಿ ಚಕಬಂದಿಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಕಾಲಂ ನಂಬರ 8 ರಲ್ಲಿ ನಮೂದಿಸಿರುತ್ತೇವೆ ಅಂತಾ ನುಡಿಯುತ್ತಾರೆ. ನಿಪಿ. 4 ರಲ್ಲಿ ಇರುವ ಅಪರಾದ ಸ್ಥಳದ ನಕಾಶೆಯು ಅಪೂರ್ಣ ಇರುತ್ತದೆ ಎಂದರೆ ಸರಿಯಲ್ಲ. ಪಂಚರನ್ನು ನಾನೇ ಕರೆಸಿರುತ್ತೇನೆ, ಪಂಚರು ಅನ್ಸಾರಿ ಗಲ್ಲಿಯವರು ಇರುತ್ತಾರೆ. ಸಾಕ್ಷಿದಾರರ ಹೇಳಿಕೆಗಳನ್ನು ನಮ್ಮ ಬರಹಗಾರರು ಟೈಪ ಮಾಡಿರುತ್ತಾರೆ. ಹೇಳಿಕೆಗಳನ್ನು ಬರಹಗಾರರ ಮುಂದೆ ಹೇಳಿರುತ್ತಾರೆ ಎಂದರೆ ಸಾಕ್ಷಿಯು ನನ್ನ ಮುಂದೆ ಮತ್ತು ಬರಹಗಾರರ ಮುಂದೆ ಹೇಳಿರುತ್ತಾರೆ ಅಂತಾ ನುಡಿಯುತ್ತಾರೆ. ಬರಹಗಾರರು ಏನು ಟೈಪ ಮಾಡಿರುತ್ತರೋ ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾವು ಹೇಳಿದಂತೆ ಟೈಪ ಮಾಡಿದರ ಮೇರೆಗೆ ಸಹಿ ಮಾಡಿರುತ್ತೇನೆ ಅಂತಾ ನುಡಿಯುತ್ತಾರೆ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲ. ಚಾಸಾ 1 ರವರು ಠಾಣೆಗೆ ಬಂದು ದೂರನ್ನು ಸಲ್ಲಿಸಿರುವುದಿಲ್ಲ. ನಾನು ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸ್ಥಳ ಪಂಚನಾಮೆ ಮಾಡದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 17-10-2017 ರಂದು ಮ. 01.00 ಗಂಟೆಗೆ ನಾನು ಠಾಣಾಧಿಕಾರಿಯ ಕರ್ತವ್ಯದಲ್ಲಿ ಇದ್ದಾಗ ಚಾಸ-1 ರವರು ನೀಡಿದ ಗಣಕೀಕೃತ ದೂರಿನ ಸಾರಾಂಶದ ಮೇರೆಗೆ ಗುನ್ಹಾ ಸಂಖ್ಯೆ 200/2017 ಅಂತಾ ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರ.ವ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ 3.30 ರಿಂದ 4.30 ರವರೆಗೆ ಚಾಸಾ 1 ರವರು ತೋರಿಸಿದ ಗುನ್ಹಾ ಸ್ಥಳದ ಪಂಚನಾಮೆಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 1 ರವರು ನೀಡಿದ ಮದುವೆ ಆಮಂತ್ರಣ ಪತ್ರಿಕೆ ಮತ್ತು ನಿಖಾ ಪುಸ್ತಕದ ಅಟೇಸ್ಟೇಡ್ ಮಾಡಿದ ಪ್ರತಿಗಳನ್ನು, ಆಧಾರ ಕಾರ್ಡ ಮತ್ತು ಮದುವೆ ಭಾವಚಿತ್ರಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ದಿನ ಚಾಸಾ 4 ರಿಂದ 9 ರವರ ಹೇಳಿಕೆಗಳನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ತನಿಖೆಗಾಗಿ ಅದೇ ದಿನ ಚಾಸಾ 12 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ